ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಎಸ್.ಸಿ ನಂ: **205/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಾನಂದ ಚೋಪಡೆ | ಪ್ರಾಸಾ: 3 |
| ತಂದೆಯ ಹೆಸರು | : | ರಾಮಕೃಷ್ಣ ಚೋಪಡೆ | ಚಾಸಾ: 5 |
| ಪ್ರಾಯ | : | 54 ವರ್ಷ | ದಿನಾಂಕ 24.01.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಬಸ್ ಚಾಲಕ | |
| ವಾಸಸ್ಥಳ | : | ರಾಮಾಪೂರ ಸೈಟ್, ಸವದತ್ತಿ, ಬೆಳಗಾವಿ | |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

**ಚಾಸಾ-6** ಮಂಜುಳಾ ನನ್ನ ಹೆಂಡತಿ. ನನ್ನ ಮನೆ ಸವದತ್ತಿಯ ರಾಮಾಪೂರ ಸೈಟ್‌ನಲ್ಲಿರುತ್ತದೆ. ನನಗೆ **ಚಾಸಾ-7** ಸಿದ್ದರಾಯಿ ಕೌಜಲಗಿ, **ಚಾಸಾ-8** ಮಹಾದೇವಿ ಕೌಜಲಗಿ ಮತ್ತು **ಚಾಸಾ-9** ಮಲ್ಕಮ್ಮಾ ಬಗರಿಕಾರ ಗೊತ್ತು. ನನಗೆ ಮೃತ ಶಬಾನಾ ಗೊತ್ತು. ಆಕೆಯ ಮನೆ ನನ್ನ ಮನೆಯ ಪಕ್ಕದಲ್ಲಿತ್ತು. ಸದರಿ ಮನೆ ಶಿವಾನಂದ ವಾಲಿಕಾರ ಇವರಿಗೆ ಸೇರಿದ್ದಾಗಿದ್ದು, ಸದರಿ ಮನಯಲ್ಲಿ ಶಬಾನಾ ವಾಸ ಮಾಡುತ್ತಿದ್ದಳು. ಆಕೆ ತೀರಿಕೊಳ್ಳುವ

ಸುಮಾರು **15** ದಿನಗಳ ಹಿಂದಿನಿಂದ ಸದರಿ ಮನೆಯಲ್ಲಿ ಆಕೆ ವಾಸ ಮಾಡುತ್ತಿದ್ದಳು. ಶಬಾನಾಳ ಜೊತೆಯಲ್ಲಿ ಆಕೆಯ **6-7** ವರ್ಷದ ಮಗಳು ವಾಸ ಮಾಡುತ್ತಿದ್ದಳು.

**2.** ದಿನಾಂಕ **18.08.2022** ರಂದು ಮುಂಜಾನೆ **10.30** ಗಂಟೆ ಸುಮಾರಿಗೆ ನಾನು ನನ್ನ ಮನೆಯಲ್ಲಿ ಊಟ ಮಾಡುತ್ತಿದ್ದೆ. ಆಗ ಶಬಾಳಾನ ಮಗಳು ಚೀರಾಡಿದ ಶಬ್ದ ಕೇಳಿಸಿತು. ಆಗ ನಾನು ಊಟ ಮಾಡುವುದನ್ನು ಬಿಟ್ಟು ಶಬಾನಾಳ ಮನೆಗೆ ಓಡಿ ಬಂದಿರುತ್ತೇನೆ. ನಾನು ಅಲ್ಲಿ ಹೋಗಿ ನೋಡಿದಾಗ ಮನೆಯ ಬಾಗಿಲು ತೆರೆದಿತ್ತು. ಆಗ ಮನೆಯೊಳಗೆ ಶಬಾನಾ ಕೆಳಗೆ ಬಿದ್ದಿದ್ದಳು. ಆಗ ಆರೋಪಿ ಅಲ್ಲಿ ಇದ್ದು, ಆತನ ಕೈಯಲ್ಲಿ ಒಂದು ಚಾಕು ಇದ್ದು, ಆತ ಶಬಾನಾಳ ತಲೆಯ ಮೇಲಿ ಕಾಲಿಟ್ಟು, ಆಕೆಯ ಕುತ್ತಿಗೆಯನ್ನು ಕೊಯ್ಯುತ್ತಿದ್ದ. ಆಗ ರಕ್ತ ಹೊರಗೆ ಬರುತ್ತಿತ್ತು. ಆಗ ನಾನು ನನ್ನ ಹೆಂಡತಿಯನ್ನು ಕರೆದೆ. ಆಗ ನನ್ನ ಹೆಂಡತಿ ಬಂದು ಅಲ್ಲಿಯ ಸ್ಥಿತಿಯನ್ನು ನೋಡಿ ಹೆದರಿದಳು. ಆಗ ಪಕ್ಕದ ಮನೆಯ ಚಾಸಾ-**7,** ಚಾಸಾ-**8** ಮಹಾದೇವಿ ಮತ್ತು ಚಾಸಾ-**9** ಮಲ್ಲಮ್ಮ ಅಲ್ಲಿಗೆ ಬಂದಿರುತ್ತಾರೆ. ಆಗ ಆರೋಪಿಯು ಚಾಕು ಹಿಡಿದುಕೊಂಡು ಅಲ್ಲಿಂದ ಓಡಿ ಹೋಗಿರುತ್ತಾನೆ.

**3.** ನಂತರ ಮಧ್ಯಾಹ್ನ **12.30** ಗಂಟೆಗೆ ಶಬಾನಾಳ ತಂದೆ ತಾಯಿ ಅಲ್ಲಿಗೆ ಬಂದಿರುತ್ತಾರೆ ಮತ್ತು ಘಟನೆಯ ಬಗ್ಗೆ ನನ್ನನ್ನು ಕೇಳಿರುತ್ತಾರೆ. ನಾನು ಅವರಲ್ಲಿ ಘಟನೆಯ ಬಗ್ಗೆ ತಿಳಿಸಿರುತ್ತೇನೆ. ನಂತರ ಮರುದಿನ ನಾನು ಪೋಲಿಸ ಠಾಣೆಗೆ ಹೋಗಿ ಘಟನೆಯ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**4.** ನಂತರ ದಿನಾಂಕ **23.08.2022** ರಂದು ಪೋಲಿಸರು ನನ್ನನ್ನು ಸವದತ್ತಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ನ್ಯಾಯಾಲಯದಲ್ಲಿ ನಾನು ನ್ಯಾಯಾಧೀಶರ ಮುಂದೆ ಸದರಿ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆ ಸದರಿ ಹೇಳಿಕೆಯಾಗಿದ್ದು, ಅದರ ಎರಡು ಪುಟಗಳಲ್ಲಿ ನನ್ನ ಸಹಿಗಳು ಇರುತ್ತವೆ. ಸದರಿ ಹೇಳಿಕೆಯನ್ನು ನಿಪಿ-**25** ಎಂದು ಮತ್ತು ಅದರಲ್ಲಿರುವ ನನ್ನ ಸಹಿಗಳನ್ನು ನಿಪಿ-**25**(ಎ) ಮತ್ತು ನಿಪಿ-**25**(ಬಿ) ಎಂದು ಗುರುತಿಸಲಾಯಿತು. ಆರೋಪಿಯು ಶಬಾನಾಳ ಮೇಲೆ ಈ ಮೇಲೆ ಹೇಳಿದಂತೆ ಯಾವ ಕಾರಣಕ್ಕೆ ಹಲ್ಲೆ ಮಾಡಿ ಕತ್ತು ಕೊಯ್ದಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸದರಿ ಘಟನೆಯಲ್ಲಿ ಶಬಾನಾ ಸ್ಥಳದಲ್ಲಿ ತೀರಿಕೊಂಡಿದ್ದಳು.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿಃ ಶ್ರೀ ಎಸ್ ಕೆ ಪಿ ವಕೀಲರಿಂದಃ</u>

**5.** ನನ್ನ ಮನೆ ಅಯ್ಯಪ್ಪಸ್ವಾಮಿ ನಗರದಲ್ಲಿ ಇಲ್ಲ. ನನ್ನ ಮನೆ ರಾಮಾಪೂರ ಸೈಟನಲ್ಲಿರುತ್ತದೆ. ನಾನು ವಿ ಆರ್ ಎಲ್ ಖಾಸಗಿ ಬಸ್ ಚಾಲಕನಾಗಿ **34** ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಸದರಿ ಬಸ್ ಬೆಂಗಳೂರು-ಮುಂಬೈ ಮದ್ಯೆ ಓಡಾಡುತ್ತಿರುತ್ತದೆ. ನಾನು ನನ್ನ ಕೆಲಸದಲ್ಲಿ ಹೋದರೆ ಮನೆಯಲ್ಲಿ ನನ್ನ ಹೆಂಡತಿ ಮಾತ್ರ ಇರುತ್ತಾಳೆ. ನನಗೆ ತಿಂಗಳಲ್ಲಿ ಇಪ್ಪತ್ತು ದಿನ ಕರ್ತವ್ಯ ಮತ್ತು ಹತ್ತು ದಿನಗಳ ಕಾಲ ರಜೆ ಇರುತ್ತದೆ. ಈ ಕೇಸನ ಘಟನೆಯಾಗಿದೆ ಎನ್ನುವ ಸಂದರ್ಭದಲ್ಲಿ ನಾನು ರಜೆಯ ಮೇಲೆ ಇದ್ದೆ. ಈ ಕೇಸನ ಘಟನೆಯಾಗಿದೆ ಎನ್ನುವ ಸಮಯದಲ್ಲಿ ದಿನಾಂಕ **17.08.2022** ರಿಂದ ಹತ್ತು ದಿನಗಳ ಕಾಲ ರಜೆಯಲ್ಲಿದ್ದೆ. ದಿನಾಂಕ **17.08.2022** ರಂದು ನಾನು ಬೆಂಗಳೂರಿನಿಂದ ಊರಿಗೆ ಬೆಳಿಗ್ಗೆ ಬಂದಿದ್ದೆ.

ಆದರೆ ಆ ರೀತಿ ನಾನು ರಜೆಯ ಮೇಲಿದ್ದೆ ಎಂದು ತೋರಿಸುವ ಬಗ್ಗೆ ನನ್ನಲ್ಲಿ ಯಾವುದೇ ದಾಖಲೆ ಇಲ್ಲ. ದಿನಾಂಕ **17.08.2022** ರಂದು ಬೆಳಿಗ್ಗೆ ಊರಿಗೆ ಬಂದು ನಾಸ್ಟಾ ಮಾಡಿ ಮನೆಯಲ್ಲಿ ಸಾಯಂಕಾಲತನಕ ಮಲಗಿದ್ದೆ.

**6.** ಆರೋಪಿಯನ್ನು ನಾನು ಪೋಲಿಸ ಠಾಣೆಯಲ್ಲಿ ಮೊದಲ ಬಾರಿ ನೋಡಿದ್ದು ಎಂದರೆ ಸರಿಯಲ್ಲ. ಪೋಲಿಸರು ನನಗೆ ಆರೋಪಿಯನ್ನು ಪೋಲಿಸ ಠಾಣೆಯಲ್ಲಿ ಮೊದಲ ಬಾರಿಗೆ ತೋರಿಸಿದ್ದು ಎಂದರೆ ಸರಿಯಲ್ಲ. ಆರೋಪಿಯನ್ನು ಮೊದಲ ಬಾರಿಗೆ ನಾನು ಆತ ಶಬಾನಾಳಿಗೆ ಚಾಕುವಿನಿಂದ ಹಲ್ಲೆ ಮಾಡುತ್ತಿದ್ದ ಸಮಯದಲ್ಲಿ ನೋಡಿರುತ್ತೇನೆ. ಆ ಸಂದರ್ಭದಲ್ಲಿ ಆರೋಪಿ ಮತ್ತು ಶಬಾನಾಳ ಮಧ್ಯೆ ಯಾವ ರೀತಿ ಸಂಬಂಧ ಇತ್ತು ಎಂದು ನನಗೆ ಗೊತ್ತಿರಲಿಲ್ಲ. ಈ ಘಟನೆಗಿಂತ ಹಿಂದೆ ನಾನು ಶಬಾನಾಳ ಜೊತೆ ಯಾವುದೇ ಮಾತುಕತೆ ಮಾಡಿಲ್ಲ ಮತ್ತು ಆಕೆ ಯಾರು ಎನ್ನುವುದು ನನಗೆ ಗೊತ್ತಿರಲಿಲ್ಲ.

**7.** ಶಬಾನಾಳು ವಾಸಿಸುವ ಮನೆಯಲ್ಲಿ ಎಷ್ಟು ರೂಮಗಳಿದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಗೆ ಮುಂಬಾಗಿಲು ಮತ್ತು ಹಿಂಬದಿಯಲ್ಲಿ ಒಂದು ಬಾಗಿಲು ಇದ್ದವು. ಆದರೆ ಸದರಿ ಮನೆಗೆಗೆ ಹಿತ್ತಲು ಇರಲಿಲ್ಲ. ಶಬಾನಾಳಿಗೆ ಬೇರೆ ಗಂಡಸರ ಜೊತೆ ಸಂಬಂಧ ಇತ್ತು ಮತ್ತು ಈ ಕಾರಣದಿಂದ ಆರೋಪಿಗೆ ಆಕೆ ವಿಚ್ಛೇದನ ನೀಡಿ ಆರೋಪಿಯಿಂದ ಪ್ರತ್ಯೇಕವಾಗಿ ಈ ಮೇಲೆ ಹೇಳಿದ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದಿದ್ದು ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ.

**8.** ಘಟನೆಯ ನಂತರ ನಾನು ಪೋಲಿಸ ಠಾಣೆಗೆ ದಿನಾಂಕ **21.08.2022** ಅಥವಾ **22.08.2022** ರಂದು ಹೋಗಿರುತ್ತೇನೆ. ಆದರೆ ಪೋಲಿಸ ಠಾಣೆಗೆ ಹೋದ ದಿನಾಂಕ ಈಗ ನನಗೆ ನಿಖರವಾಗಿ ನೆನಪಿಲ್ಲ. ನಾನು ಪೋಲಿಸರ ಮುಂದೆ ನೀಡಿರುತ್ತೇನೆ ಎನ್ನುವ ಹೇಳಿಕೆಯಲ್ಲಿ "ನಿನ್ನೆ ದಿನಾಂಕ **18.08.2022** ರಂದು ಮುಂಜಾನೆ **10.30** ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಊಟ ಮಾಡುತ್ತಿದ್ದೆನು" ಎಂದು ಹೇಳಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ**-1** ಎಂದು ಗುರುತಿಸಲಾಯಿತು. ಶಬಾನಾ ವಾಸ ಮಾಡುತ್ತಿದ್ದ ಮನೆ ನನ್ನ ಮನೆಗೆ ಹೊಂದಿಕೊಂಡು ಇರುತ್ತದೆ. ನಾನು ಮನೆಯಲ್ಲಿ ಊಟ ಮಾಡುತ್ತಿದ್ದಾಗ ಶಬಾನಾಳ ಮಗಳು ಚೀರಾಡುತ್ತಿದ್ದ ಅಂದರೆ ಅಳುತ್ತಿದ್ದ ಶಬ್ದ ಕೇಳಿತ್ತು. ಶಬಾನಾಳ ಮಗಳು ಮನೆಯ ಬಾಗಿಲಿನ ಹೊರಗೆ ಅಳುತ್ತಿದ್ದಳು. ಶಬಾನಾಳ ಮಗಳು ಮನೆಯ ಮುಂಬಾಲಿನಿಂದ ನಾಲ್ಕೈದು ಅಡಿ ಅಂತರದಲ್ಲಿ ನಿಂತಿದ್ದಳು. ನಾನು ಶಬಾನಾಳ ಮನೆಗೆ ಓಡಿ ಹೋದಾಗ ಶಬಾನಾಳ ಮಗು ನನ್ನಲ್ಲಿ ಏನೂ ಮಾತನಾಡಿಲ್ಲ ಆದರೆ ನಾನು ಆಕೆಯಲ್ಲಿ ಏನಾಗಿದೆ ಎಂದು ಕೇಳಿರುತ್ತೇನೆ. ನಾನು ಮಗುವಿನ ಚೀರಾಟದ ಶಬ್ದ ಬಿಟ್ಟು ಬೇರೆಯವರ ಯಾವುದೇ ರೀತಿಯ ಅಳುವ ಅಥವಾ ಚೀರಾಟದ ಶಬ್ದವನ್ನು ಕೇಳಿಲ್ಲ. ನಾನು ಶಬಾನಾಳ ಮನೆಗೆ ಹೋದಾಗ ಶಬಾನಾಳ ತಲೆ ಮನೆಯ ಮುಂಬಾಗಿಲಿನ ಕಡೆ ಇತ್ತು. ಮನೆಯ ಮುಂಬಾಗಿಲು ಒಂದೇ ಇದ್ದು, ಅದು ಅರ್ಧ ತೆರೆದಿತ್ತು. ಮನೆಯೊಳಗೆ ಏನು ಘಟನೆ ಇತ್ತು ಎನ್ನುವುದು ಹೊರಗಿನಿಂದ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ.

**9.** ಆ ದಿನ ಆರೋಪಿ ಯಾವ ರೀತಿ ಮತ್ತು ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದ ಎಂದು ನನಗೆ ಗೊತ್ತಿಲ್ಲ. ನಾನು ಶಬಾನಾಳ ಮನೆಗೆ ಹೋಗಿ ನಾನು ನಿಂತಿದ್ದ ಸ್ಥಳ ಆಕೆ ಬಿದ್ದಿದ್ದ ಸ್ಥಳ ಐದಾರು ಅಡಿ ದೂರದಲ್ಲಿತ್ತು. ಈಗ

ನ್ಯಾಯಾಲಯದ ಮುಂದೆ ಇರುವ ಮುಮಾ-7 ಚಾಕು ಆರೋಪಿಯ ಕೈಯಲ್ಲಿತ್ತು ಎನ್ನುವುದನ್ನು ನನಗೆ ಈಗ ಹೇಳಲು ಸಾಧ್ಯವಿಲ್ಲ. ನಾನು ನಂತರ ನನ್ನ ಹೆಂಡತಿಯನ್ನು ಕರೆದಾಗ ಆರೋಪಿಯು ಶಬಾನಾಳ ಮನೆಯೊಳಗೆ ಇದ್ದ. ನಾನು ನನ್ನ ಹೆಂಡತಿಯನ್ನು ಸ್ಥಳಕ್ಕೆ ಬಾ ಬಾ ಎಂದು ಕರೆದಿರುತ್ತೇನೆ. ಮಂಜುಳಾ ಸ್ಥಳಕ್ಕೆ ಬಂದು ಘಟನೆಯ ಬಗ್ಗೆ ನನ್ನನ್ನು ಏನೂ ಕೇಳಿಲ್ಲ. ನನ್ನ ಹೆಂಡತಿ ಸ್ಥಳಕ್ಕೆ ಬಂದಾಗ ಆರೋಪಿ ಮನೆಯೊಳಗೆ ಇದ್ದ. ಆ ಸಂದರ್ಭದಲ್ಲಿ ನಾನು ಮನೆಯ ಬಾಗಿಲು ಹಾಕಿ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿಲ್ಲ. ಆರೋಪಿಯು ಮನೆಯಲ್ಲಿ ಸುಮಾರು 2 – 3 ನಿಮಿಷಗಳ ಕಾಲ ಇದ್ದ. ಸುಮಾರು 5 - 6 ನಿಮಿಷಗಳ ಕಾಲದಲ್ಲಿ ಚಾಸಾ-7 ರಿಂದ ಚಾಸಾ-9 ರವರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿಯು ಮನೆಯಿಂದ ಹೊರಗೆ ಬಂದು ಮನೆಯ ಮುಂದೆ ಇದ್ದ ತಗ್ಗು ಪ್ರದೇಶದಲ್ಲಿ ಜಿಗಿದು ಓಡಿ ಹೋಗಿರುತ್ತಾನೆ. ಆ ರೀತಿ ಓಡಿ ಹೋಗುವಾಗ ಚಾಕುವನ್ನು ಹೊರತು ಪಡಿಸಿ ಬೇರೆ ಯಾವುದೇ ವಸ್ತುಗಳು ಆರೋಪಿಯ ಕೈಯಲ್ಲಿರಲಿಲ್ಲ. ಮಾಂಸಾಹಾರಿ ಅಡುಗೆ ಮಾಡುವ ಮನೆಗಳಲ್ಲಿ ಸಾಮಾನ್ಯವಾಗಿ ಮುಮಾ-7 ರೀತಿಯ ಚಾಕು ಇರುತ್ತದೆ ಎಂದರೆ ಸರಿ.

10. ನಂತರ ಮಧ್ಯಾಹ್ನ 12.30 ಗಂಟೆಗೆ ಶಬಾನಾಳ ತಂದೆ ತಾಯಿ ಮನೆಗೆ ಬಂದಿರುತ್ತಾರೆ. ಅವರು ಪೋಲಿಸರಿಗೆ ಘಟನೆಯ ಬಗ್ಗೆ ದೂರು ನೀಡಿರುತ್ತಾರೆ. ಶಬಾನಾಳ ತಂದೆ ತಾಯಿ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ಪೋಲಿಸರಿಗೆ ತಿಳಿಸಲು ನಾನು ಯಾವುದೇ ಪ್ರಯತ್ನ ಮಾಡಿಲ್ಲ. ಚಾಸಾ-7 ರಿಂದ ಚಾಸಾ-9 ರವರು ಸಹ ಪೋಲಿಸರಿಗೆ ವಿಷಯವನ್ನು ತಿಳಿಸಲು ಪ್ರಯತ್ನಿಸಿಲ್ಲ. ನಾನು ಆ ದಿನ ಮನೆಯಲ್ಲಿ ಮಧ್ಯಾಹ್ನ 12.00

ಗಂಟೆಯವರೆಗೆ ಇದ್ದೆ. ಘಟನೆಯಾದ ನಂತರ ಸುಮಾರು ಒಂದರಿಂದ ಒಂದುವರೆ ಗಂಟೆಯತನಕ ನಾನು ಮನೆಯಲ್ಲಿದ್ದೆ.

**11.** ಪೋಲಿಸರು ನನಗೆ ಒತ್ತಾಯ ಮಾಡಿದ ಮೇರೆಗೆ ನಾನು ನ್ಯಾಯಾಧೀಶರ ಮುಂದೆ ನಿಪಿ-**25** ರಂತೆ ಹೇಳಿಕೆ ನೀಡಿದ್ದು ಎಂದರೆ ಸರಿಯಲ್ಲ. ಈ ಕೇಸನ ಘಟನೆಗೆ ಆರೋಪಿ ಕಾರಣ ಅಲ್ಲ ಎಂದರೆ ಸರಿಯಲ್ಲ. ಶಬಾನಾಳು ಈ ಮೇಲೆ ಹೇಳಿದ ಮನೆಯಲ್ಲಿ **15** ದಿನಗಳ ಕಾಲ ವಾಸ ಮಾಡುತ್ತಿದ್ದಾಗ ಸದರಿ ಮನೆಗೆ ಬೇರೆ ಗಂಡಸರು ಬಂದು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಘಟನೆ ಬೆಳಿಗ್ಗೆ **10.30** ಆಗಿದ್ದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲ ಎಂದರೆಸರಿಯಲ್ಲ. ನಾನು ಶಬಾನಾಳ ಮನೆಯ ಪಕ್ಕದಲ್ಲಿ ವಾಸ ಮಾಡುತ್ತಿದ್ದೆ ಎನ್ನುವ ಕಾರಣಕ್ಕೆ ಪೋಲಿಸರು ಮತ್ತು ಶಬಾನಾಳ ಸಂಬಂಧಿಕರು ಹೇಳಿಕೊಟ್ಟಂತೆ ನಾನು ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುಹೇಳಿಕೆಃ**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.